ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆ ಮತ್ತು ರೇಷ್ಮೆ ಸಚಿವರು) :

ಅ) ಹೌದು.

ಆ) ದಿನಾಂಕ: 31–03–2009 ರಂದು ರಾತ್ರಿ ಸುಮಾರು 8.15ಕ್ಕೆ ಬೆಂಕಿ ಅಪಘಾತ ಸಂಭವಿಸಿರುತ್ತದೆ.

ಇ) ಈ ಅಗ್ನಿ ದುರಂತದಿಂದ ಸುಮಾರು ರೂ. 250.16 ಲಕ್ಷಗಳು ನಷ್ಟವಾಗಿದೆ. ಈ ದುರಂತಕ್ಕೆ ಕಾರಣಗಳೇನು ಎಂಬ ಕುರಿತು ಸುದೀರ್ಘವಾದ ತನಿಖೆಯನ್ನು City Crime Branch ಪೋಲಿಸರು ಕೈಗೊಂಡಿರುತ್ತಾರೆ.

ಈ) ಬೆಂಕಿ ಅಪಘಾತಕ್ಕೆ ಸಂಬಂಧಿಸಿದಂತೆ City Crime Branch ತನಿಖೆಯನ್ನು ಕೈಗೊಂಡಿದೆ. ನಿವೃತ್ತ ನ್ಯಾಯಾಧೀಶರು ಮತ್ತು ನಿವೃತ್ತ ಮಹಾಲೇಖಪಾಲರವರನ್ನೊಳಗೊಂಡ ಒಂದು ತನಿಖಾ ಮಂಡಳಿಯನ್ನು ಸಹ ರಚಿಸಲಾಗಿದೆ.

ಉ) ತನಿಖಾ ವರದಿಯ ಆಧಾರದ ಮೇಲೆ ತಪ್ಪಿಸ್ಥರ ವಿರುದ್ಧ ಕಾನೂನು ರೀತಿ ಕ್ರಮಗಳನ್ನು ಕೈಗೊಳ್ಳಲಾಗುವುದು.

30 ಶ್ರೀ ವಸಂತ ಬಂಗೇರ. ಕೆ (ಬೆಳ್ತಂಗಡಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ರಮ ಸಕ್ರಮ ಸಮಿತಿಯನ್ನು ರಚಿಸದಿರುವುದರಿಂದ, ದಕ್ಷಿಣ ಕನ್ನಡ ಜಿಲ್ಲೆಯ ನೂರಾರು ಕೃಷಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅಕ್ರಮ ಸಕ್ರಮ ಸಮಿತಿಯನ್ನು ರಚಿಸದಿರಲು ಕಾರಣವೇನು ಹಾಗೂ ಯಾವಾಗ ರಚಿಸಲಾಗುವುದು;

ಇ) ದಕ್ಷಿಣ ಕನ್ನಡ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಕೃಷಿ ಭೂಮಿ ಸಕ್ರಮಕ್ಕಾಗಿ ಸಲ್ಲಿಸಿರುವ ಅರ್ಜಿಗಳೆಷ್ಟು (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಹೌದು.

ಆ) ಕರ್ನಾಟಕ ಭೂ ಕಂದಾಯ ಕಾಯ್ದೆ 94(ಎ) ಮತ್ತು 94(ಬಿ)ರಡಿ ನಮೂನೆ 50, 53ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡುವ

ಅವಧಿಯು ದಿನಾಂಕ: 26.04.2008 ರಂದು ಮುಕ್ತಾಯಗೊಂಡಿರುತ್ತದೆ. ಸರ್ಕಾರವು ಕರ್ನಾಟಕ ಭೂ ಕಂದಾಯ 1964ರ ಕಲಂ 94(ಬಿ)ಗೆ ಅಧಿಸೂಚನೆ ಸಂ:ಸಂವ್ಯಶಾಇ 20 ಶಾಸನ 2008 ದಿ: 15.09.2009 ರನ್ವಯ ತಿದ್ದುಪಡಿ ತಂದು ನಮೂನೆ 50,53 ರಲ್ಲಿ ಸಲ್ಲಿಸಿದ ಅರ್ಜಿಗಳನ್ನು ವಿಲೇ ಮಾಡುವ ಅವಧಿಯನ್ನು ಮುಂದಿನ 3 ವರ್ಷಗಳ ಅವಧಿಗೆ ವಿಸ್ತರಿಸಲಾಗಿರುತ್ತದೆ.

ಅದರಂತೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಳ್ಯ, ಬೆಳ್ತಂಗಡಿ, ಪುತ್ತೂರು ತಾಲ್ಲೂಕುಗಳಿಗೆ ಈಗಾಗಲೇ ಅಕ್ರಮ-ಸಕ್ರಮ ಸಮಿತಿ ರಚಿಸಲಾಗಿದ್ದು, ಉಳಿದ ತಾಲ್ಲೂಕುಗಳಿಗೆ ಸಧ್ಯದಲ್ಲಿಯೇ ರಚಿಸಲಾಗುವುದು.

ಇ) ಒಟ್ಟು 225117 ಅರ್ಜಿಗಳು.

ತಾಲ್ಲೂಕುವಾರು ವಿವರ ಅನುಬಂಧದಲ್ಲಿ ಲಗತ್ತಿಸಿದೆ.

ಅನುಬಂಧ

ಕ್ರ ಸಂ.	ತಾಲ್ಲೂಕು	ನಮೂನೆ 50			ನಮೂನೆ 53		
		ಸ್ವೀಕೃತವಾದ ಒಟ್ಟು ಅರ್ಜಿಗಳು	ಈವರೆಗೆ ವಿಲೇವಾರಿಯಾದ ಅರ್ಜಿಗಳು	ಬಾಕಿ	ಸ್ವೀಕೃತವಾದ ಒಟ್ಟು ಅರ್ಜಿಗಳು	ಈವರೆಗೆ ವಿಲೇವಾರಿಯಾದ ಅರ್ಜಿಗಳು	ಬಾಕಿ
1	ಮಂಗಳೂರು	12179	12179	0	5963	5770	193
2	ಮೂಡಬಿದ್ರೆ	6306	6272	34	4925	2524	2401
3	ಬಂಟ್ವಾಳ	25113	25113	0	27038	20732	6306
4	ಬೆಳ್ತಂಗಡಿ	23970	23894	76	27030	21820	5210
5	ಪುತ್ತೂರು	19401	17846	1555	19359	9351	10008
6	ಸುಳ್ಯ	17752	17015	737	18050	15821	2229
7	ಕಡಬ	9009	8714	295	9022	8517	505
	ಒಟ್ಟು	**113730**	**111033**	**2697**	**111387**	**84535**	**26852**

762 ಶ್ರೀ ಶಿವಶಂಕರರೆಡ್ಡಿ ಎನ್.ಹೆಚ್. : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬರಪೀಡಿತ ಜಿಲ್ಲೆಗಳಿಗೆ ನೀರಾವರಿ ಯೋಜನೆಗಳನ್ನು ರೂಪಿಸಲು ಡಾ: ಪರಮಶಿವಯ್ಯನವರ ಅಂತಿಮ ವರದಿಯನ್ನು ಸರಕಾರಕ್ಕೆ ಸಲ್ಲಿಸಲಾಗಿದೆಯೇ;